TRACING OF SMT. SUMITRA DESAI

195. SRI B. PUTTASWAMIAH (Ramanagaram) :—

Will the Chief Minister be pleased to state —

(*a*) whether Smt. Sumitra Desai who was missing from Home for Mentally Retaded Men has since been traced ;

(*b*) if not, the stage at which the effort made by Government in tracing her stand at present ;

(*c*) the number of officers engaged in this work and the number of police dogs pressed into service, whether the Government has sought the assistance of C. B. I. in this regard ;

(*d*) whether the police report has been received in this regard ;

(*e*) the expenditure so for incurred by Government in tracing out Smt. Sumitra Desai ?

SRI N. HUTCHAMASTHI GOWDA:--(Minister for Revenue) [On behalf of
SRI DEVARAJ URS (Chief Minister)] :—

(*a*) No.

(*b*) Efforts to trace Smt. Sumitra Desai are continuing.

(*c*) 47 Officers are engaged in tracing Smt. Sumitra Desai. The assistance of the C. B. I. has also been sought. No Police dogs were pressed into service.

(*d*) Yes

(*e*) Rs. 4,257.35 towards T. A. and D. A. of Officers.

ಶ್ರೀ ಜೆ. ಎಲ್. ಕಬಾಡಿ :— ಶ್ರೀಮತಿ ಸುಮಿತ್ರ ದೇಸಾಯಿಯವರು ಬೆಂಗಳೂರಿಗೆ ಯಾವ ತಾರೀಖು ಬಂದರು ಮತ್ತು ಅವರು ಬಂದಾಗ ಯಾರಲ್ಲಿ ಉಳಿದುಕೊಂಡರು ?

*ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈಗ ನಮ್ಮ ಮುಂದೆ ಇರತಕ್ಕಂಥಾ ಪ್ರಶ್ನೆ ಅವರನ್ನು ಹುಡುಕತಕ್ಕ ಕೆಲಸ. ಹಿಂದೆ ನಡೆದಂತಹ ಘಟನೆಗಳು ಈಗ ನಮ್ಮ ಮುಂದೆ ಇಲ್ಲ. ಅವರು ಪತ್ತೆ ಆಗಿದ್ದಾರೆಯೇ ಎನ್ನುವ ವಿಷಯವನ್ನು ತಿಳಿಯುವುದು ಮಾತ್ರ ಈಗ ನಮ್ಮ ಮುಂದೆ ಇರತಕ್ಕಂಥಾ ಪ್ರಶ್ನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ :— ಈ ಪ್ರಶ್ನೆ ನಮ್ಮ ಮುಂದಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು :— ಅದೆಲ್ಲಾ ಆಗಿದೆ. ಈಗ ಅವರನ್ನು ಹುಡುಕುವುದಕ್ಕೆ ಏನು ಪ್ರಯತ್ನ ನಡೆದಿದೆ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ.

ಶ್ರೀ ಜೆ. ಎಲ್. ಕಬಾಡಿ :— ಅವರನ್ನು ಪತ್ತೆ ಹಚ್ಚುವ ಕಾರ್ಯ ಮುಂದುವರಿದಿದೆಯೇ ? ಇಲ್ಲಿಯವರೆಗೂ ಪೋಲೀಸಿನವರು ಶ್ರೀಮತಿ ಸುಮಿತ್ರಾದೇಸಾಯಿ ಅವರನ್ನು ತಪಾಸಣೆ ಮಾಡುವುದಕ್ಕೆ ನಾನಾ ಕಡೆ ಹೋಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರಬೇಕು. ಆದ್ದರಿಂದ ಅವರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಎಲ್ಲಿಯವರಿಗೆ ಮುಂದುವರಿದಿದೆ ಎನ್ನುವ ವಿಚಾರದಲ್ಲಿ ನಾವು ಉಪ ಪ್ರಶ್ನೆಯನ್ನು ಕೇಳುವುದು ಸರಿಯಲ್ಲವೇ ?

ಅಧ್ಯಕ್ಷರು :— ಮುಖ್ಯಮಂತ್ರಿಗಳು ಮಾಡಿದಂತಹ ಸ್ಟೇಟ್‌ಮೆಂಟಿನಲ್ಲಿ ಅದೆಲ್ಲಾ ಇದೆ. ಅದು ಹಳೆಯ ಕಥೆಯಾಯಿತು. ಈಗ ಅವರನ್ನು ಹುಡುಕುವ ಪ್ರಶ್ನೆ ಮಾತ್ರ ನಮ್ಮ ಮುಂದೆ ಇರುವುದು.

ಶ್ರೀ ಜೆ. ಎಲ್ ಕಬಾಡಿ :— ಶ್ರೀಮತಿ ಸುಮಿತ್ರಾ ದೇಸಾಯಿಯವರನ್ನು ಪತ್ತೆ ಹಚ್ಚುವ ಪ್ರಯತ್ನಗಳು ಮುಂದುವರಿಯುತ್ತಿವೆ ಎಂದು ಹೇಳಿದ್ದೀರಿ, ಹಾಗಾದರೆ ಅವರನ್ನು ಪತ್ತೆ ಹಚ್ಚುವುದಕ್ಕೆ ಎಲ್ಲೆಲ್ಲಿ ಅವರನ್ನು ಹುಡುಕಿದರು ಮತ್ತು ಸುಮಿತ್ರಾದೇಸಾಯಿಯವರು ಬೆಂಗಳೂರಿಗೆ ಬಂದಾಗ ಎಲ್ಲಿ ತಂಗಿದ್ದರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಹಿಂದೆ ನಡೆದಂತಹ ಘಟನೆಗಳಿಗೆ ಮೂಲ್ಯ ಮುಖ್ಯಮಂತ್ರಿಗಳು ಹಿಂದೆ ಈ ಸಭೆಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಈ ಪ್ರಶ್ನೆ ಈಗ ಅವರನ್ನು ಹುಡುಕತಕ್ಕ ಕೆಲಸ ಎಷ್ಟರಮಟ್ಟಿಗೆ ಆಗಿದೆ ಎನ್ನುವುದು ಮಾತ್ರ ಇದರಲ್ಲಿ ಸ್ಪಷ್ಟವಾಗಿದೆ. ಇದಕ್ಕೆ ಸಂಬಂಧಪಟ್ಟ ಉತ್ತರವನ್ನು ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : — ಶ್ರೀಮತಿ ಸುಮಿತ್ರಾ ದೇಸಾಯಿಯವರನ್ನು ಪತ್ತೆ ಹಚ್ಚುವವುದರ ಬಗ್ಗೆ ಪೋಲೀಸ್ ವರಿ ಬಂದಿದೆ ಎಂದು ಉತ್ತರ ಕೊಟ್ಟಿದ್ದೀರಿ, ಅವರನ್ನು ಪತ್ತೆ ಹಚ್ಚುವ ತರಬೂದಿನಲ್ಲಿ 47 ಜನ ಪೋಲೀಸ್ ಅಧಿಕಾರಿಗಳು ನಿರತ ರಾಗಿದ್ದರು ಎಂದು ಹೇಳಿದ್ದೀರಿ. ಆ 47 ಮಂದಿ ಪೋಲೀಸ್ ಅಧಿಕಾರಿಗಳು ರಾಷ್ಟ್ರದ ಯಾವ ಯಾವ ಭಾಗದಲ್ಲಿ ತನಿಖೆ ನಡೆಸಿದ್ದಾರೆ ಮತ್ತು ಅವರ ಹೆಸರೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಅವರ ಹೆಸರು ನನ್ನಲ್ಲಿ ಇಲ್ಲ. ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಒಬ್ಬರು, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಒಬ್ಬರು, ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ 5 ಜನ. ಪೋಲೀಸ್ ಇನ್‌ಸ್ಪೆಕ್ಟರ್ 20 ಜನ. ಸಬ್ ಇನ್‌ಸ್ಪೆಕ್ಟರ್ 20 ಜನ. ಅವರು ಬಾಂಬೆ, ಸಿರಡಿ, ಪೂನ, ಮಹಾಬಲೇಶ್ವರ, ಮೌಂಟ್ ಅಬು, ಅಹಮದಾಬಾದ್, ಹರಿದ್ವಾರ, ಡೆಲ್ಲಿ ಕೃಷ್ಣಗಿರಿ, ಲಕ್ನೋ ತಿರುವನ್ನಾಮಲೆ, ಜಯಪುರ, ಬನಾರಸ್, ರುಷಿಕೇಶ, ಪಾಂಡುಚೇರಿ, ಗೋವ, ಮರ್ಮಗೋವ, ನಂಕಿ, ಮೈಟ್‌ಫೀಲ್ಡ್ ಮುಂತಾದ ಕಡೆಗಳಲ್ಲಿ ತನಿಖೆ ನಡೆಸಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : — ಈ ಬಗ್ಗೆ ಕೆಲವು ಮಂತ್ರಿಗಳ ಮೇಲೆ ಆಪಾದನೆ ಇರುವುದರಿಂದ ಅವರ ಮನೆಗಳನ್ನು ಶೋಧನೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಬೆಂಗಳೂರಿನಲ್ಲಿ ಎಲ್ಲೆಲ್ಲಿ ಶೋಧನೆ ಮಾಡಬೇಕು ಅಲ್ಲೆಲ್ಲಾ ಶೋಧನೆ ಮಾಡಿದ್ದೇವೆ

ಶ್ರೀ ಜೆ. ಎಲ್. ಕಬಾಡಿ : — ಶ್ರೀಮತಿ ಸುಮಿತ್ರಾ ದೇಸಾಯಿಯವರು ಮೇ ತಿಂಗಳು 17ನೇ ತಾರೀಖು ಬೆಂಗಳೂರಿಗೆ ಬಂದಾಗ ಹಿಂದೆ ಪೋಲೀಸ್ ಖಾತೆಯ ಉಪಮಂತ್ರಿಗಳಾಗಿದ್ದ ಶ್ರೀ ಆರ್. ಡಿ, ಕಿತ್ತೂರ್ ಅವರು ಶ್ರೀಮತಿ ಸುಮಿತ್ರಾ ದೇಸಾಯಿಯವರನ್ನು ಪೋಲೀಸಿನವರ ಕಡೆಯಿಂದ ಬನ್ನೇರುಘಟ್ಟ ಆಶ್ರಮಕ್ಕೆ ಕಳುಹಿಸಿ ಅವರ ಮೇಲೆ ಮಾನ್ಸಿಟರಿಂಗ್ ಇಡಬೇಕು ಎಂದು ಖಾನಾದರೂ ಪೋಲೀಸ್ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ: — ಈಗ ನಮ್ಮ ಮುಂದಿರುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :— ಶ್ರೀಮತಿ ಸುಮಿತ್ರಾ ದೇಸಾಯಿಯವರ ಮೇಲೆ ಬಂದಿರತಕ್ಕ ಆರೋಪಣೆ ಏನಿದೆ ಅದನ್ನು ಅವರ ಮಾನದ ದೃಷ್ಟಿಯಿಂದ ಎಷ್ಟು ಕಾಲದಲ್ಲಿ ಪಾರು ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್. ಮಾನನೀಯ ಹೆಣ್ಣುಮಕ್ಕಳ ಮೇಲೆ ಆರೋಪಣೆಯನ್ನು ಹೊರಿಸುವುದು ಸಾಧುವಲ್ಲ. ಮಂತ್ರಿಗಳ ಮೇಲೆ ಆರೋಪಣೆ ಇದ್ದರೆ ಹೊರಿಸಿ.

ಶ್ರೀ ಕೋಣಂದೂರು ಲಿಂಗಪ್ಪ :— ಮಾನವೀಯ ದೃಷ್ಟಿಯಿಂದ ಅವರ ಗೌರವವನ್ನು ಉಳಿಸುವುದಕ್ಕೋಸ್ಕರ ಈ ಪ್ರಕರಣವನ್ನು ಎಷ್ಟು ಕಾಲದಲ್ಲಿ ಹುಗಿಸುತ್ತೀರಾ ಎಂದು ನಾನು ಕೇಳಿದ್ದು. ಆದರೆ ಮಾನ್ಯ ಮಂತ್ರಿಗಳು ತಪ್ಪು ತಿಳಿದುಕೊಂಡರೆ ನಾನು ಮಾಡುವುದು.

ಶ್ರೀ ಹೆಚ್. ಸಿದ್ದವೀರಪ್ಪ :—ಅವರ ಮಾನ ರಕ್ಷಣೆ ಮಾಡುವುದು ನಿಮ್ಮ ಕೈಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್ :— ಕೇಂದ್ರ ತನಿಖಾ ಮಂಡಲಿಯ ಸಹಾಯವನ್ನು ಕೇಳಲಾಗಿದೆ ಎಂದು ಹೇಳಿದ್ದೀರಿ. ಅವರ ಸಹಾಯವನ್ನು ಯಾವಾಗ ತೆಗೆದುಕೊಂಡಿರಿ, ಅವರಿಂದ ಏನಾದರೂ ವರದಿ ಬಂದಿದೆಯೇ ಅಥವಾ ನೀವೇ ನಾದರು ವರದಿ ತರಿಸಿಕೊಂಡಿದ್ದೀರಾ, ತರಿಸಿಕೊಂಡಿದ್ದರೆ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಅವರಿಗೆ ಈ ಕೆಲಸ ವಹಿಸಿದ ಮೇಲೆ ಇಲ್ಲಿಯವರೆಗೆ ಅವರಿಂದ ವರದಿ ಬಂದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಸುಮಿತ್ರಾ ದೇಸಾಯಿಯವರನ್ನು ಪತ್ತೆ ಹಚ್ಚುವ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದ್ದೀರಿ ಈ ಪತ್ತೆ ಮಾಡುವ ಕಾರ್ಯವನ್ನು ಕೇಂದ್ರ ತನಿಖಾ ಮಂಡಲಿಯವರಿಗೆ ವಹಿಸಿದ ಮೇಲೆ ತಾವೂ ಸಹ ತನಿಖೆ ನಡೆಸುತ್ತಿದ್ದೀರೋ ಅಥವಾ ನಿಲ್ಲಿಸಿದ್ದೀರೋ ?

ಶ್ರೀ ಎನ್. ಹುಚ್ಚಮಾಸಿ ಗೌಡ :—ಅವರ ಸಹಾಯವನ್ನೂ ಸಹ ಕೇಳಿದ್ದೇವೆ. ನಾವೂ ಸಹ ಈ ಕೆಲಸವನ್ನು ಮುಂದುವರಿಸುತ್ತಿದ್ದೇವೆ

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಈ ಕೆಲಸವನ್ನು ಕೇಂದ್ರ ತನಿಖಾ ಮಂಡಲಿಯವರಿಗೆ ವಹಿಸಿದ ಮೇಲೆ, ಸುಮಿತ್ರಾ ದೇಸಾಯಿಯವರನ್ನು ಹುಡಕಲು ಅವರು ತಮ್ಮ ಪ್ರತಿನಿಧಿಗಳನ್ನು ಮೈಸೂರು ರಾಜ್ಯಕ್ಕೆ ಏನಾದರೂ ಕಳಿಸಿದ್ದಾರೆಯೇ? ಅಥವಾ ಮೈಸೂರು ರಾಜ್ಯಕ್ಕೆ ಕಳಿಸಬಾರದೆಂದು ತಾವೇನಾದರೂ ಸೂಚನೆ ಕೊಟ್ಟಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ: —ಅವರು ಮೈಸೂರು ರಾಜ್ಯಕ್ಕೂ ಸಹ ಹುಡುಕಲು ಬಂದಿರಬಹುದು. ಆದರೆ ಅವರು ಬರುವ ವೇಳೆಯಲ್ಲಿ ನಮಗೆ ತಿಳಿಸುವುದಿಲ್ಲ.

ಶ್ರೀ ಟಿ. ಆರ್ ಶಾಮಣ್ಣ :....ಸುಮಿತ್ರಾ ದೇಸಾಯಿ ಬದುಕಿದ್ದಾರೆಯೇ ಅಥವಾ ಸತ್ತಿದ್ದಾರೆಯೇ ಎಂದು ಜನರು ಕೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಪಿ. ಮುನಿಯಪ್ಪ :....ಸುಮಿತ್ರಾ ದೇಸಾಯಿಯವರನ್ನು ಹುಡುಕಲು ಪೋಲೀಸಿನವರು ಗೋವಾಕ್ಕೂ ಸಹ ಹೋಗಿದ್ದರು ಎಂದು ಮೂನ್ಯ ಮಂತ್ರಿಗಳು ಹೇಳಿದರು. ಮೇಲ್ಮನೆಯ ವಿರೋಧಪಕ್ಷದ ನಾಯಕರು ಗೋವಾದ ಲಾಡ್ಜಿಂಗ್ ಒಂದರಲ್ಲಿ ಸುಮಿತ್ರಾ ದೇಸಾಯಿಯನ್ನು ನೋಡಿದ್ದೆ ಎಂದು ಹೇಳಿರುವ ವರದಿಯನ್ನು ನಾನು ಓದಿದ್ದೇನೆ. ಆ ಬಗ್ಗೆ ಸರ್ಕಾರಕ್ಕೆ ವರದಿ ಏನಾದರೂ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ: —ಅವರು ಯಾವ ಸಂದರ್ಭದಲ್ಲಿದ್ದರು, ಯಾವ ಕಾಲದಲ್ಲಿದ್ದರು ಎಂಬುದು ಗೊತ್ತಿಲ್ಲ. ಅದ್ದರಿಂದ ಪೋಲೀಸಿನವರು ಪತ್ತೆ ಮಾಡಲು ಹೋದ ತಾರೀಖಿಗೆ ಅದನ್ನು ಹೋಲಿಸಿ ನೋಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ : ನಮ್ಮ ವಿರೋಧಪಕ್ಷದ ನಾಯಕರ ಮೇಲೆ ಆ ರೀತಿಯ ಅಪಾದನೆ ಮಾಡುವುದು ಸರಿಯಲ್ಲ. ಅವರಿಗೆ ಅಂತಹ ಹವ್ಯಾಸವಿಲ್ಲ. ಆದಕಾರಣ ಅವರು ತಮ್ಮ ಅಪಾದನೆಯನ್ನು ಹಾಪಸ್ ಪಡೆಯಬೇಕು.

ಅಧ್ಯಕ್ಷರು : ಸುಮಿತ್ರಾದೇಸಾಯಿ ಅವರು ಮಂತ್ರಿಗಳ ಮನೆಯಲ್ಲಿದ್ದರು ಎಂದು ತಾವು ಪ್ರಶ್ನೆ ಕೇಳಿದಂತೆ ಅವರೂ ಸಹ ಕೇಳಿದರು. ಅದರಲ್ಲಿ ತಪ್ಪೇನಿದೆ. ತಾವು ಅವರ ಪ್ರಶ್ನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ ; ತಮ್ಮಲ್ಲಿ ನನ್ನ ಒಂದು ಮನವಿ ಏನೆಂದರೆ, ಆ ಕಡೆಯ ಸದಸ್ಯರೇ ಆಗಲಿ, ಈ ಕಡೆಯ ಸದಸ್ಯರೇ ಆಗಲಿ, ಇಂತಹ ಪ್ರಶ್ನೆಗಳನ್ನು ಕೇಳಿದ ಸಂದರ್ಭದಲ್ಲಿ ತಾವು ಆ ಪ್ರಶ್ನೆಗಳನ್ನು ತಡೆಹಿಡಿದು, ಮಂತ್ರಿಗಳು ಉತ್ತರ ಕೊಡಬಾರದೆಂದು ತಾವು ಹೇಳಬೇಕು.

ಅಧ್ಯಕ್ಷರು : ಸದಸ್ಯರುಗಳು ಆ ರೀತಿಯ ಪ್ರಶ್ನೆಗಳನ್ನು ಕೇಳದಿರುವುದು ಒಳ್ಳೆಯದು. ಏಕೆಂದರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಮೇಲೆ ರೂಲ್ಸ್ ಪ್ರಕಾರ ಅದನ್ನು ತಡೆಹಿಡಿಯುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ತಮ್ಮ ಮೇಲೆ ತಪ್ಪು ಇಟ್ಟುಕೊಂಡು ಬೇರೆಯವರ ಮೇಲೆ ಗೂಬೆ ಕೂರಿಸುವುದಕ್ಕೆ ಇವರು ಹೋಗುತ್ತಿದ್ದಾರೆ. ಆ ರೀತಿ ಪ್ರಶ್ನೆ ಕೇಳಲು ಅವರಿಗೆ ನಾಚಿಕೆಯಾಗುವುದಿಲ್ಲವೇ ಎಂದು ಕೇಳುತ್ತೇನೆ.

ಅಧ್ಯಕ್ಷರು : ಹಾಗೆಲ್ಲಾ ತಾವು ಮಾತನಾಡಬಾರದು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಚ್. ಎಸ್. ಸಿದ್ದಪ್ಪ : ಸುಮಿತ್ರಾ ದೇಸಾಯಿ ಅವರನ್ನು ಪತ್ತೆ ಮಾಡಲು ಎಷ್ಟು ಜನ ಸಿಬ್ಬಂದಿಯನ್ನು ಕಳಿಸಲಾಗಿತ್ತು, ಅದಕ್ಕಾಗಿ ಎಷ್ಟು ಹಣ ಖರ್ಚಾಯಿತು ಎಂಬುದನ್ನು ಹೇಳಿದ್ದೀರಿ. ಈ ರೀತಿ ಪತ್ತೆಮಾಡಲು ಯಾರಾದರು ದೂರು ಕೊಟ್ಟಿದ್ದರೇ? ಕೊಟ್ಟಿದ್ದರೆ ಬರಹದಲ್ಲಿ ಕೊಟ್ಟಿದ್ದರೆ ಅಥವಾ ಓರಲ್ ಆಗಿ ಹೇಳಿದ್ದರೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ದೂರು ಏನೂ ಬಂದಿಲ್ಲ. ಆದರೂ ಇದು ಸರ್ಕಾರದ ಕರ್ತವ್ಯವೆಂದು ತಿಳಿದುಕೊಂಡು ಪತ್ತೆ ಮಾಡಲು ಇಷ್ಟು ಹಣವನ್ನು ಖರ್ಚು ಮಾಡಿರುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ : ಪೋಲೀಸ್ ವರದಿ ಬಂದಿದೆ ಎಂದು ಇಲ್ಲಿ ಹೇಳಿದ್ದೀರಿ. ಆ ವರದಿಯಲ್ಲಿ ಏನು ಹೇಳಿದ್ದಾರೆಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪತ್ತೆಯಾಗಿಲ್ಲ ಎಂದು ಆ ವರದಿಯಲ್ಲಿ ಹೇಳಲಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಆ ವರದಿಯನ್ನು ಸಭೆಯ ಮುಂದೆ ಇಡಬೇಕು

(ಉತ್ತರವಿಲ್ಲ)

ಶ್ರೀ ಜೆ. ಎಲ್. ಕಬಾಡಿ ; ನಮ್ಮ ಪ್ರಶ್ನೆಗಳಿಗೆ ಸರ್ಕಾರದಿಂದ ಸರಿಯಾದ ಉತ್ತರ ಬರುತ್ತಿಲ್ಲವಾದ್ದರಿಂದ ತಾವು ಮತ್ತು ವಿರೋಧಪಕ್ಷದ ನಾಯಕರು ಆ

ವರದಿಯನ್ನು ನೋಡಿ ಮುಂದೆ ನಮಗೆ ಏನು ಹೇಳಬೇಕೋ ಅದನ್ನು ನೀವೇ ಹೇಳಿ. ಏಕೆಂದರೆ ನಾವು ಕೇಳುವ ಪ್ರಶ್ನೆಗಳಿಗೆಲ್ಲಾ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಇದು ಸರಿಯಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಸ್ಟೇಟ್ ಮೆಂಟ್ ಮಾಡುತ್ತೇನೆ ಎಂದು ಈ ಹಿಂದೆಯೇ ಹೇಳಿದ್ದರಿಂದ ನಾನು ಅದಕ್ಕಾಗಿ ತಾರೀಖನ್ನು ನಿಗದಿ ಮಾಡುತ್ತೇನೆಂದು ಹೇಳಿದ್ದೆ. ಅಷ್ಟರಲ್ಲಿಯೇ ಸಪ್ಲಿಮೆಂಟರಿ ಪ್ರಶ್ನೆಗಳು ಬಂದವು. ಈ ಸಂದರ್ಭದಲ್ಲಿ ಕೇಳುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳದೆ ಅವರ ಮೇಲೆ ಇವರು ಅಪಾದನೆ ಮಾಡುವುದು, ಇವರ ಮೇಲೆ ಅವರು ಅಪಾದನೆ ಮಾಡುವುದು ನಡೆದರೆ, ನಾನು ಯಾರಿಗೂ ಪ್ರಶ್ನೆ ಕೇಳಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ರಿಸ್ಪ್ರೆಸ್ಟ್ ಆಗಿ ಪ್ರಶ್ನೆ ಹಾಕಿದರೆ ಮಾನ್ಯ ಮಂತ್ರಿಗಳಿಂದ ಉತ್ತರ ಸಿಗುತ್ತದೆ. ಇಲ್ಲವೇ ಮುಖ್ಯ ಮಂತ್ರಿಗಳು ಸ್ಟೇಟ್ ಮೆಂಟ್ ಮಾಡುತ್ತೇನೆಂದು ಹೇಳಿರುವುದರಿಂದ ಅಲ್ಲಿಯ ವರೆಗೆ ಕಾದುನೋಡಿ,

ಶ್ರೀ ಎಚ್. ಟಿ. ಕೃಷ್ಣಪ್ಪ ; ಈಗ ಸರ್ಕಾರದವರ ಮೇಲೆ ಬಂದಿರುವ ಅಪಾದನೆಯಿಂದ ಮುಕ್ತರಾಗುವುದಕ್ಕಾದರೂ ಪೊಲೀಸ್ ವರದಿಯನ್ನು ಈ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ ?

ಶ್ರೀ. ಎನ್. ಹುಚ್ಚಮಾಸ್ತಿಗೌಡ : ಸರ್ಕಾರದ ಮೇಲೆ ಯಾವ ಅಪಾದನೆಯೂ ಬಂದಿಲ್ಲ ಆದರೂ ವಿರೋಧ ಪಕ್ಷದವರು ರಾಜಕೀಯ ದೃಷ್ಟಿಯಿಂದ ಇಲ್ಲವೇ ಸರ್ಕಾರದ ಮೇಲೆ ತಪ್ಪು ಹೊರಿಸಬೇಕೆಂಬ ದೃಷ್ಟಿಯಿಂದ ಈ ರೀತಿ ಅಪಾದನೆ ಮಾಡುತ್ತಿದ್ದಾರೆ. ಮತ್ತು ಈ ಒಂದು ದೃಷ್ಟಿಯನ್ನು ಇಟ್ಟುಕೊಂಡು ಸರ್ಕಾರದ ಮೇಲೆ ವಿಶೇಷವಾದಂಥ ಅಪಾದನೆ ಮಾಡುತ್ತಿದ್ದಾರೆಂಬುದು ಸರ್ಕಾರಕ್ಕೂ ಗೊತ್ತಾಗಿದೆ. ಆದರೂ ಕೂಡ, ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಮೇಲೆ ಪರೀಕ್ಷೆ ಮಾಡುವುದಕ್ಕೆ ಎಷ್ಟೆಷ್ಟು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಅಷ್ಟು ಕಾರ್ಯಕ್ರಮಗಳನ್ನು ಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಪಟ್ಟಿದೆ. ಆದರೆ ಇಂತಹ ಸಂದರ್ಭಗಳಲ್ಲಿ ಪೊಲೀಸ್ ವರದಿಯನ್ನು ಮಾನ್ಯ ಸಭೆಗೆ ತಿಳಿಸುವ ಪದ್ಧತಿ ಯಾವಾಗಲೂ ಇಲ್ಲ. ಆ ವರದಿಯ ಮುಖ್ಯ ಸಾರಾಂಶ ವೇನೆಂದರೆ ಸುಮಿತ್ರಾದೇಸಾಯಿ ಇನ್ನೂ ಸಿಕ್ಕಿಲ್ಲ ಎಂಬುದು.

SRI S. M. YAHYA.—You have said there is no complaint against Smt. Sumithra Desai. Why should the Government spend so much money? Will the Government close the chapter once and for all?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಕರಣದಲ್ಲಿ ದೂರು ಬರದಿದ್ದರೂ ಸಹ ಇದು ಸಾರ್ವಜನಿಕರ ದೃಷ್ಟಿಯನ್ನು ಸೆಳೆದ ಪ್ರಕರಣವಾದ್ದರಿಂದ, ಸುಮಿತ್ರಾದೇಸಾಯಿ ಇದ್ದಾಳೆಯೇ, ಇಲ್ಲವೇ ಆಥವಾ ಹೇಗಾಗಿದ್ದಾಳೆ ಎಂಬುದನ್ನು ಪತ್ತೆ ಮಾಡುವುದು ಸರ್ಕಾರದ ಕರ್ತವ್ಯವೆಂದು ತಿಳಿದುಕೊಂಡು ಈ ಕಾರ್ಯ ಮಾಡುತ್ತಿದ್ದೇವೆ. ಇದಕ್ಕಾಗಿ ಹೆಚ್ಚು ಹಣ ಖರ್ಚಾದರೂ ಸೂಡ ಅದು ವ್ಯರ್ಥವಾದ ಖರ್ಚು ಎಂದು ನಾನು ಭಾವಿಸುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ: ಈಗ ತಾನೆ ಹೇಳಿದಿರಿ ಸರ್ಕಾರದ ಮೇಲೆ ಯಾವ ಅಪಾದನೆಯಿಲ್ಲ ಎಂದು, ಸುಮಿತ್ರಾದೇಸಾಯಿ ಬಗ್ಗೆ ರಾಜ್ಯ ಸಚಿವರಾದ ಶ್ರೀ ಕಿತ್ತೂರ್‌ರವರು ಯಾತಕ್ಕೆ ರಾಜೀನಾಮೆ ಕೊಡಬೇಕಾಗಿತ್ತು, ರಾಜೀನಾಮೆಯನ್ನು ಮುಖ್ಯಮಂತ್ರಿಗಳು ಯಾತಕ್ಕೆ ಒಪ್ಪಿಕೊಳ್ಳಬೇಕಾಗಿತ್ತು ?

ಶ್ರೀ ಎನ್. ಹುಚ್ಚಮಾಸ್ತಿಗೌಡ: —Caesars wife should be above suspician ಎಂದು ಹೇಳುವ ದೃಷ್ಟಿಯಿಂದ ರಾಜೀನಾಮೆ ಕೊಟ್ಟಿದ್ದಾರೆ, ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ಮುಖ್ಯ ಮಂತ್ರಿಗಳು ಯಾವಾಗ ಹೇಳಿಕೆ ಕೊಡುತ್ತಾರೆ ? ಎರಡನೆಯದು 47 ಮಂದಿ ಅಧಿಕಾರಿಗಳು ಇದರಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದಾರೆ, ಅವರು ರಾಜ್ಯ ಸರ್ಕಾರದ ಪೋಲೀಸ್ ಸಿಬ್ಬಂದಿಗೆ ಸಂಬಂಧಪಟ್ಟವರು ಎಂದು ಭಾವನೆ ಮಾಡಿದ್ದೇನೆ. ಕೇಂದ್ರ ಸರ್ಕಾರದ ತನಿಖಾ ಮಂಡಳಿ—ಸಿ.ಬಿ.ಐ.ಗೆ ವಹಿಸಿದ ಮೇಲೆ, ಅದನ್ನು ಅವರಿಗೆ ಬಿಡುವುದಕ್ಕೆ ಯೋಚನೆ ಮಾಡುತ್ತೀರಾ ಆಥವಾ ನಮ್ಮ 47 ಜನ ಪೋಲೀಸರ ಬೆಂಬಲವನ್ನು ತೆಗೆದುಕೊಂಡು, ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಅಧ್ಯಕ್ಷರು. —ಅದಕ್ಕೆ ಉತ್ತರ ಕೊಟ್ಟಿದ್ದು ಆಯಿತು.

GREEN BELT ARROUND BANGALORE

22. Sri K. R. SRINIVASULU NAYUDU (Shanthinagar)—Will the Minister for Municipal Administration be pleased to state :—

(*a*) whether there is any proposal before Government to provide green belt around Bangalore;